ಹೂವಿಗೆ ಒಂದು ವರ್ಷ ತುಂಬಿದ ಸಂದರ್ಭ. ಅಂದು ಅವರು ಶಿವಮೊಗ್ಗೆಯ ವಿಶೇಷ ಸಿಹಿತಿನಿಸು, ಒಣಹಣ್ಣುಗಳ ಜೊತೆಗೆ, ಮೇಣಬತ್ತಿಯ ದೀಪ ಉರಿಸಲು ಎಂದು ಕಾಣಿಕೆ ಕೊಟ್ಟ ಹಿತ್ತಾಳೆಯ ಸುಂದರ ಕುಂಡಪಾತ್ರ ಈಗಲೂ ಸುಮಿತ್ರಾ ಶಾಂತಿನಾಥರ ಹೆಸರು ಹೇಳುತ್ತಿದೆ.

ಅಮ್ಮಿನಭಾವಿಯ ತಮ್ಮ ದತ್ತಕ ಆಸ್ತಿಯನ್ನು ಮಾರಬೇಕಿತ್ತು. ಆಸ್ತಿ ಇಲ್ಲಿ, ಅವರು ಶಿವಮೊಗ್ಗೆಯಲ್ಲಿ. ಕೊಳ್ಳುವವನಿಗೆ ನಡುವೆ ಬೆದರಿಕೆ, ಅಡ್ಡಗಾಲು ಹಾಕುತ್ತಿದ್ದವನು ಈಗ ಅನೇಕ ವರ್ಷಗಳಿಂದ ಜಮೀನು ಉಪಭೋಗಿಸುತ್ತಿದ್ದ ಆಸಾಮಿ. ಶಾಂತಿನಾಥರ ಇಚ್ಛೆಯ ಮೇರೆಗೆ, ಆಗಿನ ಜಿಲ್ಲಾ ಪೊಲೀಸ್ ವರಿಷ್ಠರ ಮೂಲಕ ಆ ಸಮಸ್ಯೆ ಬಗೆಹರಿಸಿಕೊಟ್ಟೆ. ಅದರಿಂದ ಅವರಿಗೆ ನೆಮ್ಮದಿ ಸಿಕ್ಕಿತ್ತು.

ದೇಸಾಯರು ಅನೇಕ ವರ್ಷ ಕೇಂದ್ರ ಸಾಹಿತ್ಯ ಅಕಾದೆಮಿ, ಭಾರತೀಯ ಜ್ಞಾನಪೀಠಗಳ ವರಿಷ್ಠ ಸದಸ್ಯರಾಗಿದ್ದರು. ಆಗ ಕನ್ನಡದ ಅನೇಕ ಲೇಖಕರಿಗೆ ನ್ಯಾಯ ಸಿಗುವಂತೆ ಮೌನವಾಗಿ, ಪ್ರಾಮಾಣಿಕವಾಗಿ ದುಡಿದಿದ್ದಾರೆ. ಅಲ್ಲಿಯ ಸಮಿತಿಗಳಲ್ಲಿ ಪ್ರಸ್ತಾವಿತಗೊಳ್ಳುವ ಆಯಾ ಭಾಷೆಯ ಕೃತಿಗಳ ಬಗ್ಗೆ, ಸಾಮಾನ್ಯವಾಗಿ ಇಂಗ್ಲಿಷಿನಲ್ಲಿ ನೇರ, ಖಚಿತ ಭಾಷೆಯಲ್ಲಿ ವರದಿಗಳನ್ನು ಸಿದ್ಧಪಡಿಸಬೇಕಾಗುತ್ತದೆ; ಅದಕ್ಕಾಗಿ ಶಾಂತಿನಾಥರು ಬಹಳ ಶ್ರಮ ವಹಿಸುತ್ತಿದ್ದರು. ಅನಂತರ ದಿಲ್ಲಿ, ಮುಂಬಯಿ ಅಥವಾ ಬೇರೆಡೆ ಆಯೋಜಿತಗೊಳ್ಳುವ ಸದಸ್ಯರ ಮಂಡಳಿಯಲ್ಲಿ ಆ ವರದಿಯ ಆಧಾರದಲ್ಲಿ ಪ್ರಸ್ತುತ ಕೃತಿಯ ಬಗ್ಗೆ ಸೋದಾಹರಣ 'ವಕಾಲತ್ತು' ವಹಿಸಬೇಕಾಗುತ್ತದೆ; ತಾವು ಸೂಚಿಸಿದ ಕೃತಿಯನ್ನು ಸಮರ್ಥಿಸಿಕೊಳ್ಳುವ ನಿಷ್ಪಕ್ಷ ಪ್ರೇಮವನ್ನು ತೋರಬೇಕಾಗುತ್ತದೆ. ಅಂಥ ಸಮಯದಲ್ಲಿ ಅವರು ತಮ್ಮ ಸಮರ್ಥ ಇಂಗ್ಲಿಷ್ ಭಾಷೆ ಮತ್ತು ಅಭಿವ್ಯಕ್ತಿಯ ಮೂಲಕ ಕನ್ನಡವನ್ನು, ಕನ್ನಡ ಲೇಖಕರನ್ನು ಸಮರ್ಥಿಸಿಕೊಂಡು, ಅದಕ್ಕೆ ಆಯ್ಕೆಯ ಪ್ರಶಸ್ತಿ ಗೌರವ ಸಲ್ಲುವಂತೆ ಮಾಡುತ್ತಿದ್ದರು. ತಾವು ಸದಸ್ಯರಾಗಿರುವ ಸಂದರ್ಭದಲ್ಲಿ ತಮ್ಮ ಅಥವಾ ತಮ್ಮ ಸಂಬಂಧಿಗಳ ಕೃತಿಗಳನ್ನು ಸೂಚಿಸಕೂಡದು ಎಂಬ ಸತ್ಯವನ್ನು ಅವರು ನಿಷ್ಠೆಯಿಂದ ಪಾಲಿಸುತ್ತಿದ್ದರು. ಹೀಗಾಗಿ, ಅವರು ಸದಸ್ಯರಾಗಿದ್ದ ದೀರ್ಘ ಅವಧಿಯಲ್ಲಿಯೇ ಅವರ ಉತ್ತಮ ಕೃತಿಗಳು ಪ್ರಕಟವಾಗಿದ್ದರೂ, ಅವು ಆಯ್ಕೆಗೊಳ್ಳದಂಥ ಸಹಜ ಸ್ಥಿತಿ ಉಂಟಾಗಿತ್ತು. ಈ ಸಮಯದಲ್ಲಿ ಶಾಂತಿನಾಥರು ಕನ್ನಡದ, ಕನ್ನಡ ಸಾಹಿತ್ಯದ ವಕೀಲರಾಗಿದ್ದರು; ತಮ್ಮ ಸಮಯ, ಶಕ್ತಿ, ಖ್ಯಾತಿ ಎಲ್ಲವನ್ನೂ ತ್ಯಾಗ ಮಾಡಿ ದುಡಿದಿದ್ದರು. ಇದು ಬಹಳ ಜನರಿಗೆ ಗೊತ್ತಿಲ್ಲ.

ಶಾಂತಿನಾಥರ ಕೊನೆಯ ದಿನಗಳು ನೋವಿನವಾಗಿದ್ದುವು. ಅವರು ಸದಾ ಕಾಲ ಪ್ರಾಣವಾಯುವಿನ ಸಿಲಿಂಡರ್ ನೆರವಿನಿಂದಲೇ ಉಸಿರಾಡಬೇಕಾಗಿತ್ತು. ಆ ಕಾಲದಲ್ಲಿ ಆಕ್ಸಿಜನ್ ಸಿಲಿಂಡರ್ ನೆರವಿನಿಂದ ಬದುಕಿದ್ದು ಅವರಿಗೆ ಸಂಕಟದ ಸಂಗತಿಯೇ ಆಗಿತ್ತು. ಯಾವಾಗಲೂ ಪಾದರಸದಂತೆ ಓಡಾಡುತ್ತಿದ್ದ, ಗೆಳೆಯರನ್ನು ಕಾಣುತ್ತಿದ್ದ, ಮಾತಾಡಿಸುತ್ತಿದ್ದ ಶಾಂತಿನಾಥರು ಹಾಸಿಗೆ ಬಿಟ್ಟು ಏಳಲಾರದಂತೆ, ಕೊಲ್ಹಾಪುರದಲ್ಲಿ ಕಟ್ಟಿಸಿಕೊಂಡಿದ್ದ, 'ಸಾವಿತ್ರಿ' ಹೆಸರಿನ ತಮ್ಮ ಹೊಸ ಮನೆಯಲ್ಲಿಯೇ ಬಂದಿಯಾಗಿದ್ದರು. ಅಟ್ಟದ ಮೇಲಿನ ದೊಡ್ಡ ಕೋಣೆಯಲ್ಲಿ, ಹಾಸಿಗೆಯ ಮೇಲೆ ಕುಳಿತೇ ನಿಧಾನ ಬರೆಯುತ್ತಿದ್ದರು, ಓದುತ್ತಿದ್ದರು, ಮಾತಾಡುತ್ತಿದ್ದರು. ಆದರೆ, ದೇಹ ಅಕಾಲಿಕವಾಗಿ ಬಹಳ ಬಳಲಿತ್ತು. ಅಂಥ ಸಮಯದಲ್ಲಿ ಒಂದು ದಿನ ಕೊಲ್ಹಾಪುರಕ್ಕೆ ಹೋಗಿ ಅವರನ್ನು ಕಂಡು ಬಂದೆ. ನನ್ನನ್ನು ನೋಡಿದೊಡನೆ, ಕರ್ನಾಟಕವನ್ನೇ ಎದುರುಗೊಂಡವರಂತೆ ಅವರು ಸಂಭ್ರಮಿಸಿದ್ದು ಮರೆಯಲಾರೆ.

ಮುಂದೆ ಅನತಿ ಕಾಲದಲ್ಲಿಯೇ ದೇಸಾಯರು ಬ್ರಹ್ಮಸ್ಥರಾದರು (25.03.1998). ಆಗ ಅವರಿಗೆ 69 ನಡೆಯುತ್ತಿತ್ತು. ಹದಿಮೂರನೇ ದಿನದ ತಿಥಿಗೆ ಕೊಲ್ಹಾಪುರಕ್ಕೆ ಹೋಗಿ ಬಂದ ಅನಂತರ, ಆಗ ನಾನು 'ಪ್ರಜಾವಾಣಿ'ಯಲ್ಲಿ ಬರೆಯುತ್ತಿದ್ದ 'ಚಹಾದ ಜೋಡಿ ಚೂಡಾದ್ಹಾಂಗ' ಅಂಕಣದಲ್ಲಿ ನಾನು